**INTERNATIONAL INDIAN SCHOOL, DAMMAM**
**MIDTERM EXAM WORKSHEETS: 2025-26**

**CLASS:VI** **SUBJECT: KANNADA**

***MID TERM PORTIONS***: -
L-1-Andada Mysore,L-4-Gooligala Kaalaga
L-5-Muddu molagalu,L-8-Lokada Neeti
**Poem**- L- 1-Kannadavendare bari nudiyalla -(poem)
Grammar-prashne roopa / Lekhanaa chinnegalu
Numbers-1-30,Unseen passage

**Lesson No & Name : ಪಾಠ- ೨ ಅಂದದ ಮೈಸೂರು** **Text Book PageNo:10-11**

**ಅ) ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ :**

೧.ಮೈಸೂರು ಕರ್ನಾಟಕದ ರಾಜ್ಯದ ಬಲು ಸುಂದರವಾದ ___________.[ನಗರ, ಪಟ್ಟಣ, ಗ್ರಾಮ]

೨. ಮೈಸೂರು ಬೆಂಗಳೂರಿನಿಂದ ___________ಕಿಲೋಮೀಟರ್ ದೂರದಲ್ಲಿದೆ. [೩೩೮, ೨೩೮, ೧೩೮]

೩. _______________ನಲ್ಲಿ ಅಂದವಾದ ಅರಮನೆಯಿದೆ. [ಮೈಸೂರು, ಮಾಲೂರು, ಮದ್ದೂರು]

೪. ಮೈಸೂರಿನ ದಸರಾ ಉತ್ಸವವು ವಿಶ್ವದಲ್ಲೇ ಪ್ರಸಿದ್ಧಿ _______ [ಪಡೆದಿದೆ, ಪಡೆದಿತ್ತು, ಪಡೆಯುತ್ತದೆ]

**ಆ) ಹೊಂದಿಸಿ ಬರೆಯಿರಿ :**

| | |
|---|---|
| ೧. ಮೈಸೂರು | ಮೆರವಣಿಗೆ |
| ೨. ವೈಭವದ | ಮೃಗಾಲಯ |
| ೩. ಜಂಬೂ ಸವಾರಿ | ಸುಂದರ ನಗರ |
| ೪. ಚಾಮರಾಜೇಂದ್ರ | ದಸರಾ ಉತ್ಸವ |

**ಇ) ಗುಂಪಿಗೆ ಸೇರದ ಪದವನ್ನು ಆರಿಸಿ ಆವರಣದಲ್ಲಿ ಬರೆಯಿರಿ :**

೧. ರಸ್ತೆ, ಮಾರ್ಗ, ದಾರಿ, ದೂರ ( )

೨. ರಾಜ್ಯ, ವಿಶ್ವ, ಜಗತ್ತು, ಪ್ರಪಂಚ ( )

೩. ಜಯ, ವಿಜಯ, ಒಲವು, ಗೆಲುವು ( )

೪. ಸಿದ್ಧಿ, ಪ್ರಸಿದ್ಧಿ, ಕೀರ್ತಿ, ಖ್ಯಾತಿ ( )

**ಈ) ಈ ವಾಕ್ಯ ಗಳನ್ನು ಸರಿ/ತಪ್ಪು ಎಂದು ಗುರುತಿಸಿ ಬರೆಯಿರಿ :**

೧. ಮೈಸೂರಿನ ಹವಾಮಾನ ಉತ್ತಮವಾಗಿಲ್ಲ. ( )

೨. ಮೈಸೂರಿನಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ( )

೩. ಮೈಸೂರಿನಲ್ಲಿ ದಸರಾ ಉತ್ಸವ ವೈಭವದಿಂದ ನೆಡೆಯುವುದಿಲ್ಲ. ( )

೪. ಚಾಮರಾಜೇಂದ್ರ ಮೃಗಾಲಯ ಮೈಸೂರಿನಲ್ಲಿದೆ. ( )

೫. ಮೈಸೂರಿನಲ್ಲಿ ನಾನಾ ಬಗೆಯ ಉದ್ಯಮಗಳಿವೆ. ( )

**ಉ) ಶಬ್ದಾರ್ಥಗಳನ್ನು ಬರೆಯಿರಿ :**

೧. ಅನತಿ = ೨. ಕುತೂಹಲ =

೩. ಪ್ರೇಕ್ಷಣೀಯ ಸ್ಥಳ = ೪. ರಸ್ತೆಯ ಇಕ್ಕೆಲಗಳು =

**ಊ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ :**

೧. ವೈಭವ-

೨. ಪ್ರವಾಸ-

೩. ಬೃಂದಾವನ-

೪. ಕಾರ್ಖಾನೆ-

**ಋ) ಮಾದರಿಯಂತೆ ಬರೆಯಿರಿ : ಮಾದರಿ: ಅಡಿಗೆ ಮಾಡುವ ಸ್ಥಳ - ಅಡಿಗೆ ಮನೆ**

೧. ತರಕಾರಿಗಳನ್ನು ಮಾರುವ ಸ್ಥಳ ( )

೨. ಗ್ರಂಥಗಳನ್ನು ಸಂಗ್ರಹಿಸುವ ಸ್ಥಳ ( )

೩. ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ ( )

೪. ಕ್ರೀಡೆಗಳು ನೆಡೆಯುವ ಸ್ಥಳ ( )

೫. ದೇವರನ್ನು ಇಡುವ ಸ್ಥಳ ( )

**ಎ) ಒಂದು ವಾಕ್ಯದಲ್ಲಿ ಉತ್ತರಿಸಿ :**

೧. ಮೈಸೂರು ಸಮುದ್ರ ಮಟ್ಟಕ್ಕಿಂತ ಎಷ್ಟು ಮೀಟರ್ ಎತ್ತರದ್ದಲಿದೆ?

ಉತ್ತರ:

೨. ಮೈಸೂರು ಅರಮನೆ ಹಿಂಭಾಗದಲ್ಲಿ ಯಾವ ಅರಮನೆಯಿದೆ?

ಉತ್ತರ:

೩. ಮೈಸೂರು ಸಮೀಪದಲ್ಲಿರುವ ಸೊಬಗಿನ ತಾಣ ಯಾವುದು?

ಉತ್ತರ:

**ಏ) ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :**

೧. ಮೈಸೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು?

ಉತ್ತರ:

೨. ಮೈಸೂರಿನ ಕೆಲವು ಜನಪ್ರಿಯ ಪದಾರ್ಥಗಳನ್ನು ಬರೆಯಿರಿ?

ಉತ್ತರ:

**Lesson No & Name: ಪಾಠ-೩ ಗೂಳಿಗಳ ಕಾಳಗ** **Text Book PageNo:14-15**

**ಅ) ಶಬ್ದ ಅರ್ಥ :**

| | |
|---|---|
| ೧. ವಿವೇಕ = | ೫. ಖಡ್ಗ = |
| ೨. ಸಾಕಷ್ಟು = | ೬. ಕಾಳಗ = |
| ೩. ಸಮೂಹ = | ೭. ಧಿಕ್ಕರಿಸಿತು = |
| ೪. ಬಲಿಷ್ಠ = | ೮. ಕೋಣನ ಮುಂದೆ ಕಿನ್ನರಿ ಬಾರಿಸುವುದು = |

**ಆ) ಆವರಣದಲ್ಲಿರುವ ಶಬ್ದಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ**: (ಗೂಳಿಗಳು, ತರಲೆ ,ಕೆರೆ, ಜಗಳ)

೧. ಒಂದು ಕಾಡಿನ ಬಳಿ ಒಂದು ದೊಡ್ಡ __________ಇತ್ತು.

೨. ಒಂದು ದಿನ ಎರಡು ಕೊಬ್ಬಿದ ______________ ಅಲ್ಲಿಗೆ ಬಂದವು.

೩. ಎರಡಕ್ಕೂ ____________ಪ್ರಾಂಭವಾಯಿತು.

೪. ಒಂದು ______________ಬುದ್ಧಿಯ ಕಪ್ಪೆಯಿತ್ತು.

**ಇ) ಹೊಂದಿಸಿ ಬರೆಯಿರಿ :**

| | |
|---|---|
| ೧. ಗೂಳಿಗಳ | ಕಟ್ಟೆಟ್ಟ ಬುತ್ತಿ |
| ೨. ಸಾಕಷ್ಟು ನೀರು | ನಗುತ್ತಿದ್ದವು |
| ೩. ನೀರಿನ ಆಳಕ್ಕೆ | ಕಾಳಗ |
| ೪. ಕೇಕೆ ಹಾಕಿ | ತುಂಬಿತ್ತು |
| ೫. ಅಪಾಯ | ಇಳಿಯಿತು |

**ಈ) ಗುಂಪಿಗೆ ಸೇರದ ಪದವನ್ನು ಆರಿಸಿ ಆವರಣದಲ್ಲಿ ಬರೆಯಿರಿ :**

೧. ಜಗಳ, ಕದನ, ಕಾಳಗ, ಪ್ರೀತಿ. **( )**

೨. ಸುಖ, ಸಂತೋಷ, ಆನಂದ, ದುಃಖ. **( )**

೩. ಶ್ರೀಮಂತ, ಧನಿಕ, ಬಡವ, ಹಣವಂತ. **( )**

೪. ಕಠಿಣ, ಸರಳ, ಸುಲಭ, ಸುಗಮ. **( )**

**ಉ) ವಿರುದ್ಧ ಪದ :**

೧. ದೊಡ್ಡದು x

೨. ಆಗ x

೩. ವಿವೇಕ x

೪. ನಗು x

೫. ಮಿತ್ರ x

೬. ಕೆಟ್ಟಗುಣ x

೭. ಬೀಳು x

**ಊ) ಈ ವಾಕ್ಯಗಳನ್ನು ಸರಿ/ತಪ್ಪು ಎಂದು ಗುರುತಿಸಿ ಬರೆಯಿರಿ :**

೧. ಒಂದು ಕಾಡಿನ ಬಳಿ ಒಂದು ದೊಡ್ಡ ಕೆರೆಯಿತ್ತು. **( )**

೨. ಒಂದು ದಿನ ಎರಡು ಕೊಬ್ಬಿದ ಕುರಿಗಳು ಅಲ್ಲಿಗೆ ಬಂದವು. **( )**

೩. ಅದೇ ಕೆರೆಯಲ್ಲಿ ನೂರಾರು ಮೊಸಳೆಗಳು ವಾಸವಾಗಿದ್ದವು. **( )**

೪. ಕಪ್ಪೆಗಳ ಗುಂಪಿನಲ್ಲಿ ಒಂದು ವಯಸ್ಸಾದ ಕಪ್ಪೆಯಿತ್ತು. **( )**

**ಋ) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಮಾಡಿರಿ :**

೧. ಕಾಡು -

೨. ಕೆರೆ -

೩. ಆಯುಧ -

೪. ಕಪ್ಪೆ -

೫. ಪ್ರಾಣ -

**ಎ) ಈ ಮಾತನ್ನು ಯಾರು ಯಾರಿಗೆ ಹೇಳಿದರು?**

೧. "ಬಂಧುಗಳೇ, ಇನ್ನು ಈ ಕಾಳಗ ನೋಡಿದ್ದು ಸಾಕು, ನಡೆಯಿರಿ ಹೋಗೋಣ."

ಉತ್ತರ:

೨. "ನಿನಗೆ ಭಯವಾದರೆ ನೀನು ಹೋಗು."

ಉತ್ತರ:

**ಏ) ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯಗಳನ್ನು ಸರಿಪಡಿಸಿ :**

೧. ಕುಡಿಯುತ್ತಿದ್ದವು ನೀರನ್ನೇ ಆ ಕೆರೆಯ

ಉತ್ತರ:

೨. ಬಂದವು ಎರಡು ಅಲ್ಲಿಗೆ ಗೂಳಿಗಳು ಕೊಬ್ಬಿದ

ಉತ್ತರ:

೩. ವಾಸವಾಗಿದ್ದ ನೂರಾರು ಕೆರೆಯಲ್ಲಿ ಕಪ್ಪೆಗಳು

ಉತ್ತರ:

೪. ಮಜವಾಗಿದೆ ಈ ಗೂಳಿಗಳ ಬಹಳ ಹೋರಾಟ

ಉತ್ತರ:

**ಐ) ಒಂದು ವಾಕ್ಯದಲ್ಲಿ ಉತ್ತರಿಸಿ :**

೧. ಒಂದು ದೊಡ್ಡ ಕೆರೆ ಎಲ್ಲಿತ್ತು?

ಉತ್ತರ:

೨. ಒಂದು ದಿನ ಕೆರೆಯ ಬಳಿಗೆ ಯಾರು ಬಂದರು?

ಉತ್ತರ:

೩. ಎಲ್ಲಾ ಕಪ್ಪೆಗಳು ಎಲ್ಲಿ ಕುಳಿತಿದ್ದವು?

ಉತ್ತರ:

೪. ಗೂಳಿಗಳು ಹೇಗಿದ್ದವು ?

ಉತ್ತರ:

೫. ಗೂಳಿಯ ದೇಹದಡಿಗೆ ಸಿಕ್ಕಿ ಎಷ್ಟು ಕಪ್ಪೆಗಳು ಜಜ್ಜಿಹೋದವು ?

ಉತ್ತರ:

**INTERNATIONAL INDIAN SCHOOL, DAMMAM**
**MIDTERM EXAM WORKSHEETS: 2025-26**

**CLASS:VI** **SUBJECT: KANNADA**

---

**ಒ) ಎರಡು -ಮೂರು ವಾಕ್ಯಗಳಲ್ಲಿ ಉತ್ತರಿಸಿ :**

೧. ಗೂಳಿಗಳು ಕೆರೆಯ ಬಳಿಗೆ ಏಕೆ ಬಂದವು?

ಉತ್ತರ:

೨. ತರಲೆ ಕಪ್ಪೆಗೆ ಎಂತಹ ಗುಣವಿತ್ತು?

ಉತ್ತರ:

೩. ಕಡೆಗೆ ಕಪ್ಪೆಗಳ ಗತಿ ಏನಾಯಿತು?

ಉತ್ತರ:

**Lesson No & Name: ಪಾಠ- ೪. ಮುದ್ದು ಮೊಲಗಳು** **Text Book PageNo:18-19**

**ಅ) ಶಬ್ದಾರ್ಥ :**

೧. ಜೋಪಾನ ಮಾಡುವುದು =

೨. ಮೊನಚಾದ =

೩. ಪುಕ್ಕಲು ಸ್ವಭಾವ =

**ಆ) ಈ ಪದಗಳನ್ನು ಹೊಂದಿಸಿ ಬರೆಯಿರಿ:**

೧. ಮೊಲಗಳು ಬಾಲ

೨. ಗುಂಪು ಸ್ವಭಾವ

೩. ಉದ್ದುದ್ದ ಮುದ್ದು ಪ್ರಾಣಿಗಳು

೪. ಮೋಟು ಜೀವಿಗಳು

೫. ಪುಕ್ಕಲು ಕಿವಿಗಳು

**ಇ) ಬಿಟ್ಟ ಸ್ಥಳ ಗಳಲ್ಲಿ ಸೂಕ್ತ ಪದಗಳನ್ನು ಬರೆಯಿರಿ : (** ಸಸ್ಯಾಹಾರಿಗಳು , ಮೃಗಾಲಯ , ಮೊಲ , ಕೊಲ್ಲುತ್ತಾರೆ , ಪುಟಾಣಿಗಳು **)**

೧. ಈ_______________ ತುಂಬಾ ಸಾಧು ಸ್ವಭಾವದ ಪ್ರಾಣಿಗಳು.

೨. ಈ ಪ್ರಾಣಿಗಳು ಶುದ್ಧ_____________.

೩. ________________ದ ಮರಿಗಳು ಬಹಳ ಬೇಗ-ಬೇಗ ಬೆಳೆಯುತ್ತವೆ.

೪. ಬೇಟೆಗಾರರೂ ಇವುಗಳನ್ನು ______________________.

೫. ಮೊಲಗಳನ್ನು _________________ ಗಳಲ್ಲೂ ಸಾಕುತ್ತಾರೆ.

**ಈ) ಇವುಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ: ಮಾದರಿ : ಸಸ್ಯಾಹಾರಿ X ಮಾಂಸಾಹಾರಿ**

| | |
|---|---|
| ೧.ಹಗಲು X | ೪. ಹಿಂಭಾಗ X |
| ೨.ಹಗುರ X | ೫. ಗ್ರಾಮ X |
| ೩.ಮೇಲು ಭಾಗ X | ೬. ಸಂತೋಷ X |

**ಉ) ಒಂದು ವಾಕ್ಯದಲ್ಲಿ ಉತ್ತರಿಸಿರಿ:**

೧. ಮೊಲಗಳು ಇಂತಹ ಪ್ರಾಣಿಗಳು?

ಉತ್ತರ:

೨. ಮೊಲಗಳು ಏನನ್ನು ತಿಂದು ಜೀವಿಸುತ್ತವೆ?

ಉತ್ತರ:

೩. ಮೊಲಗಳು ಎಲ್ಲಿ ವಾಸ ಮಾಡುತ್ತವೆ?

ಉತ್ತರ:

೪. ಮೊಲಗಳು ಒಂಟಿ ಜೀವಿಗಳೇ?

ಉತ್ತರ:

೫. ಮೊಲಗಳು ಯಾವ ಯಾವ ಬಣ್ಣದಲ್ಲಿರುತ್ತವೆ?

ಉತ್ತರ:

**ಉ) ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ :**

೧. ಮೊಲಗಳು ತಮ್ಮ ಮರಿಗಳನ್ನು ಹೇಗೆ ನೋಡಿಕೊಳ್ಳುತ್ತವೆ ?

ಉತ್ತರ:

೨. ಅಂಗೋರಾ ಎಂಬ ಮೊಲಗಳು ಯಾವ ಯಾವ ದೇಶದಲ್ಲಿರುತ್ತವೆ ?

ಉತ್ತರ:

೩. ಮೊಲಗಳು ಯಾವ ಯಾವ ಪ್ರಾಣಿಗಳಿಗೆ ಬಲಿಯಾಗುತ್ತವೆ ?

ಉತ್ತರ:

**ಅ) ಈ ಪದಗಳನ್ನು ಮಾದರಿಯಂತೆ ಏಕವಚನದಲ್ಲಿ ಬರೆಯಿರಿ : ಮಾದರಿ : ಹೂವುಗಳು - ಹೂವು**

೧. ಮೊಲಗಳು -
೨. ಪ್ರಾಣಿಗಳು -
೩. ಪೊದೆಗಳು -
೪. ಮರಿಗಳು -
೫. ಹಣ್ಣುಗಳು -
೬. ಗೂಡುಗಳು -
೭. ಬಣ್ಣಗಳು -
೮. ಪಾದಗಳು -
೯. ಕಾಡುಗಳು -
೧೦. ಬೇಟೆಗಾರರು –

**Lesson No & Name**: **ಪಾಠ – 8 ಲೋಕದ ನೀತಿ** **Book Page No: 34-35**

**ಅ) ಶಬ್ದ -ಅರ್ಥ :**

೧. ಲೋಕದ ನೀತಿ =
೨. ಹೆರಿಗೆ ದಿನ =
೩. ಪರಿ ಪರಿಯಾಗಿ =
೪. ಮರುಕ =
೫. ಗುಡುಗಿತು =
೬. ಗಡುವು =
೭. ತೆರವು =

**INTERNATIONAL INDIAN SCHOOL, DAMMAM**
**MIDTERM EXAM WORKSHEETS: 2025-26**

**CLASS:VI** **SUBJECT: KANNADA**

---

**ಆ) ಪಾಠದ ಈ ವಾಕ್ಯಗಳನ್ನು ಪೂರ್ತಿಗೊಳಿಸಿರಿ : (** ವಾರದ , ಹೆಣ್ಣು ನಾಯಿ , ಅದರಲ್ಲಿ , ನಾಲ್ಕು ಮರಿಗಳು ಹುಟ್ಟಿತ್ತು , ಆಲದ ಮರ )

೧. ಒಂದು ಹಳ್ಳಿಯ ಅಂಚಿನಲ್ಲಿ ______________ಇತ್ತು.
೨. ________________ವಯಸ್ಸಾದ ಒಂದು ಹೆಣ್ಣು ನಾಯಿ ವಾಸವಾಗಿತ್ತು.
೩. ಒಂದು ದಿನ ಬೇರೊಂದು __________________ಅದರ ಬಳಿಗೆ ಬಂದಿತು.
೪. ಎರಡು - ಮೂರು ದಿನಗಳಲ್ಲಿ____________________.
೫. ________________ಗಡುವೂ ಕಳೆದು ಹೋಯಿತು.

**ಇ) ಆವರಣದಿಂದ ಸರಿಯಾದ ಪದವನ್ನು ಆರಿಸಿ ಖಾಲಿ ಜಾಗದಲ್ಲಿ ಬರೆಯಿರಿ :**

೧. ಹಳ್ಳಿಯ ಅಂಚಿನಲ್ಲಿ ಒಂದು ಆಲದ _______________ ವಿತ್ತು. (ವರ , ಮರ , ಸರ)
೨. ದೇವರು_________________ ಒಳ್ಳೆಯದನ್ನು ಮಾಡುತ್ತಾನೆ. (ನಿನಗೆ , ನನಗೆ ,ಅವನಿಗೆ)
೩. ಗರ್ಭಿಣಿ ನಾಯಿಗೆ ಸಹಾಯ ಮಾಡುವುದು ನನ್ನ___________________. (ಧರ್ಮ , ಕರ್ಮ , ಮರ್ಮ)
೪. ನೀನು __________________ಯಾಗಿದ್ದೀಯೆ , ಜೊತೆಗೆ , ವಯಸ್ಸೂ ಆಗಿದೆ. (ಒಂಟಿ , ಜಂಟಿ ,ಕುಂಟಿ)

**ಈ) ಮಾದರಿಯಂತೆ ಬರೆಯಿರಿ : ಮಾದರಿ:** ವಯಸ್ಸು + ಆಯಿತು = ವಯಸ್ಸಾಯಿತು

೧. ಉಪಕಾರ + ಆಗುತ್ತದೆ =
೨. . ಇದ್ದರೆ + ಆಯಿತು =
೩ ಒಳ್ಳೆಯದು + ಆಗಲಿ =
೪. ಆಗ + ಆದರೂ =

**ಉ) ಸಮಾನಾರ್ಥಕ ಪದಗಳನ್ನು ಮಾದರಿಯಂತೆ ಬರೆಯಿರಿ :**

೧. ಸಂಜೆ -
೨. ವೇಳೆ -
೩. ಸಮೀಪ -
೪. ನೆಮ್ಮದಿ -
೫. ಗಡುವು -
೬. ತೆರವು –

**ಊ) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ :**

೧. ಉಪಕಾರ X
೨. ಸರಿಯಾಗಿ X
೩. ಹೊರಭಾಗ X
೪. ಈಗ X
೫. ಹುಟ್ಟು X
೬. ಮುಚ್ಚಿತು X

**ಋ) ಕೆಳಗಿನ ಮಾತು ಗಳನ್ನು ಯಾರು ಯಾರಿಗೆ ಹೇಳಿದರು?**

೧. "ಇನ್ನಾದರೂ ನನ್ನ ಗೂಡನ್ನು ನನಗೆ ಬಿಟ್ಟುಕೊಡು ".
ಉತ್ತರ:

೨. "ನಾನಂತೂ ಈ ಗೂಡು ಬಿಟ್ಟು ಎಲ್ಲಿಗೂ ಹೋಗಲಾರೆ ".
ಉತ್ತರ:

**INTERNATIONAL INDIAN SCHOOL, DAMMAM**
**MIDTERM EXAM WORKSHEETS: 2025-26**

**CLASS:VI** **SUBJECT: KANNADA**

**ಎ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ :**

೧. ಹಳ್ಳಿಯ ಅಂಚಿನಲ್ಲಿ ಯಾವ ಮರವಿತ್ತು ?

ಉತ್ತರ:

೨. ಗೂಡಿನಲ್ಲಿ ಯಾರು ವಾಸವಾಗಿದ್ದರು ?

ಉತ್ತರ:

೩. ನಾಯಿಯ ಬಳಿಗೆ ಯಾರು ಬಂದರು ?

ಉತ್ತರ:

೪. ಗರ್ಭಿಣಿ ನಾಯಿಗೆ ಎಷ್ಟು ಮರಿಗಳಾದವು ?

ಉತ್ತರ:

೫. ತಾಯಿ ನಾಯಿ ಮತ್ತೆ ಎಷ್ಟು ದಿನದ ಅವಕಾಶ ಕೇಳಿತು ?

ಉತ್ತರ:

**ಏ) ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ :**

೧. ಗೂಡಿನ ನಾಯಿಯ ದಿನಚರಿ ಹೇಗಿತ್ತು ?

ಉತ್ತರ:

೨. ವಾರದ ಗಡುವು ಮುಗಿದ ಮೇಲೆ ಗೂಡಿನ ನಾಯಿ ತಾಯಿ ನಾಯಿಗೆ ಏನು ಹೇಳಿತು ?

ಉತ್ತರ:

:

**ಸಂಖ್ಯೆಗಳು ಮತ್ತು ಸಂಖ್ಯಾ ನಾಮಗಳು -೧-೩೦ ನೋಟ್ ಪುಸ್ತಕದಲ್ಲಿ ಇದ್ದ ಹಾಗೆ**

**ವ್ಯಾಕರಣ -ಲೇಖನ ಚಿಹ್ನೆ ಗಳು -ನೋಟ್ ಪುಸ್ತಕದಲ್ಲಿ ಇದ್ದ ಹಾಗೆ**

**ವ್ಯಾಕರಣ (GRAMMAR) :**

**ಮಾದರಿಯಂತೆ ಪ್ರಶ್ನೆಗಳ ರೂಪದಲ್ಲಿ ಬರೆಯಿರಿ :**

**ಮಾದರಿ:** ೧. ಹುಲಿಗಳು ಕ್ರೂರ ಪ್ರಾಣಿಗಳು.

ಉತ್ತರ: ಹುಲಿಗಳು ಎಂತಹ ಪ್ರಾಣಿಗಳು?

೨. ಮೊಲಗಳು ಸಾಧು ಪ್ರಾಣಿಗಳು.

ಉತ್ತರ:

೩. ಮೊಲಗಳು ಗೂಡುಗಳಲ್ಲಿರುತ್ತವೆ.

ಉತ್ತರ:

೪. ಮೊಲದ ಕಿವಿಗಳು ಉದ್ದವಾಗಿರುತ್ತವೆ.

ಉತ್ತರ:

೫. ಅಂಗೋರಾ ಮೊಲಗಳು ವಿದೇಶಗಳಲ್ಲಿರುತ್ತವೆ.

ಉತ್ತರ:

**INTERNATIONAL INDIAN SCHOOL, DAMMAM**
**MIDTERM EXAM WORKSHEETS: 2025-26**

**CLASS:VI** **SUBJECT: KANNADA**

---

## ಪದ್ಯ -೧ ಕನ್ನಡವೆಂದರೆ ಬರಿ ನುಡಿಯಲ್ಲ

**I)ಶಬ್ದ ಅರ್ಥ**

೧)ಹಿರಿಮೆ = ೨)ನುಡಿ= ೩)ಜಲ=

೪)ಪಾವನ = ೫)ವಾಯು = ೬)ರವಿ=

೭)ಶಶಿ = ೮)ತಾರೆ = ೯) ಸೊಲ್ಲು =

೧೦) ಅನಂತ =

**II)ಪದ್ಯ ಪೂರ್ತಿ ಮಾಡಿ**

೧)ಕನ್ನಡವೆಂದರೆ ___________

______________________

____________________

_______ಪಾವನ ತೀರ್ಥ

**III)ಒಂದು ವಾಕ್ಯದಲ್ಲಿ ಉತ್ತರಿಸಿರಿ**:

೧)ಕನ್ನಡನಾಡಿನ ನೀರನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ ?

ಉ:

೨)ಕರುನಾಡಿನ ಕಟ್ಟಿಗೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

ಉ:

೩)ಈ ಪದ್ಯವನ್ನು (ಕನ್ನಡವೆಂದರೆ ಬರಿ ನುಡಿಯಲ್ಲ ) ಬರೆದ ಕವಿ ಯಾರು?

ಉ ).

**IV)ಹೊಂದಿಸಿ ಬರೆಯಿರಿ**:

೧)ಕಟ್ಟಿಗೆ - ನಿತ್ಯೋತ್ಸವ

೨)ನೀರು- ಅಂತರ್ಭಾವ

೩)ಗಾಳಿ- ಪಾವನ ತೀರ್ಥ

೪)ಸರಸ್ವತಿ - ಶ್ರೀ ಗಂಧ

೫)ದೇವರು- ಪಂಚ ಪ್ರಾಣ

**V) ಸ್ವಂತ ವಾಕ್ಯದಲ್ಲಿ ಉತ್ತರಿಸಿರಿ** :

೧)ಕನ್ನಡನಾಡು :.

೨)ಕ್ರೀಡಾಂಗಣ :

೩)ಪಂಚಪ್ರಾಣ :

**ಊ) ಕೆಳಗಿನ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.**

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ( ದ.ರಾ. ಬೇಂದ್ರೆ ) "ಇಳಿದು ಬಾ ತಾಯಿ ಇಳಿದು ಬಾ"ಎಂದು ಆರಂಭವಾಗುವ ಕವಿತೆಯನ್ನು ಕೇಳದ ಕನ್ನಡಿಗನಿಲ್ಲ. ಪ್ರೀತಿ ಪ್ರೇಮಗಳನ್ನು ಮೂಡಿಸಬಲ್ಲ ಕವಿತೆಗಳನ್ನು ರಚಿಸಿಕೊಟ್ಟ ವರಕವಿ ದ.ರಾ. ಬೇಂದ್ರೆ. "ರಸವೆ ಜನನ, ವಿರಸವೆ ಮರಣ, ಸಮರಸವೆ ಜೀವನ" ಎಂದು ಜೀವನವನ್ನು ಕುರಿತು ಪರಿಣಾಮಕಾರಿಯಾಗಿ ಹೇಳಿದ ಧೀಮಂತ ಕವಿ. ಬೇಂದ್ರೆಯವರ ಕಾವ್ಯನಾಮ "ಅಂಬಿಕಾತನಯದತ್ತ". ರವಿಂದ್ರನಾಥ ಟಾಗೂರ್ ರಿಂದ ತುಂಬಾ ಪ್ರಭಾವಿತರಾಗಿದ್ದ ಇವರನ್ನು ಕನ್ನಡದ "ಕನ್ನಡದ ಠಾಗೋರ್" ಎಂದು ಕರೆಯಲಾಗುತ್ತದೆ.

**ಜನನ-** ದ. ರಾ. ಬೇಂದ್ರೆ ಯವರು ಧಾರವಾಡದಲ್ಲಿ ಜನಿಸಿದರು (೧೮೯೬ ಜನವರಿ ೩೧). ತಂದೆ ರಾಮಚಂದ್ರ ಭಟ್ಟ, ತಾಯಿ ಅಂಬಿಕೆ(ಅಂಬವ್ವ) ಹಾಗು ಪತ್ನಿ ಲಕ್ಷ್ಮೀಬಾಯಿ. ಪುಣೆಯ ಕಾಲೇಜಿನಲ್ಲಿ ಬಿ.ಎ ಓದಿದರು. ನಂತರ ಎಂ.ಎ. ಪದವಿ ಗಳಿಸಿದರು. ಅಧ್ಯಾಪಕ ವೃತ್ತಿ ಶುರು ಮಾಡಿ ಕೆಲಕಾಲ ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

**ಸಾಹಿತ್ಯ-** ದ.ರಾ. ಬೇಂದ್ರೆ ಅವರ ಪ್ರಥಮ ಕಾವ್ಯ ಸಂಕಲನ "ಕೃಷ್ಣ ಕುಮಾರಿ". ತದನಂತರ "ಗರಿ", "ಕಾಮಕಸ್ತೂರಿ ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಇವರು ಬರೆದ "ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ" ಇಂದಿಗೂ ಚಿಣ್ಣರ ಅತ್ಯಂತ ಪ್ರೀತಿಪಾತ್ರ ಕವನವಾಗಿದೆ.

**ಪ್ರಶಸ್ತಿ, ಪುರಸ್ಕಾರ, ಬಿರುದು-** ದ.ರಾ. ಬೇಂದ್ರೆ ಅವರ ನಾಕುತಂತಿ ಕೃತಿಗೆ ಕೇಂದ್ರ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ **"ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ"**ದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವ ವಿದ್ಯಾನಿಲಯ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿವೆ. ೧೯೬೮ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ಲಭಿಸಿತು.

**ಈ ಪ್ರಶ್ನೆಗಳಿಗೆ ಉತ್ತರಿಸಿ :**

೧. ದ.ರಾ. ಬೇಂದ್ರೆಯವರ ಕಾವ್ಯನಾಮ ಯಾವುದು?
ಉತ್ತರ:

೨. ದ.ರಾ. ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ?
ಉತ್ತರ:

೩. ದ.ರಾ. ಬೇಂದ್ರೆಯವರು ಯಾವ ಸಮ್ಮೇಳನದ ಅಧ್ಯಕ್ಷರಾಗಿದ್ದರು?
ಉತ್ತರ:

೪. ದ.ರಾ. ಬೇಂದ್ರೆಯವರು ಯಾರಿಂದ ತುಂಬಾ ಪ್ರಭಾವಿತರಾಗಿದ್ದರು?
ಉತ್ತರ:

೫. ದ.ರಾ. ಬೇಂದ್ರೆಯವರ ಪ್ರಥಮ ಕಾವ್ಯ ಸಂಕಲನ ಯಾವುದು?
ಉತ್ತರ: